ಬೆಂಗಳೂರು ನಗರದಲ್ಲಿ ನಗರ ದರ್ಶನ ಸೇವೆ ಪ್ರಾರಂಭಿಸಿರುವುದು

3833(1032); ಶ್ರೀ ಗೋಪಾಲಯ್ಯ .ಕೆ (ಮಹಾಲಕ್ಷ್ಮಿ ಲೇಔಟ್)

ಅ) ಬೆಂಗಳೂರು ನಗರ ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಗಾಗಿ ನಗರ ದರ್ಶನ ಸೇವೆಯನ್ನು ಪ್ರಾರಂಭಿಸಲಾಗಿದೆಯೇ;

ಆ) ಹಾಗಿದ್ದರೆ, ಈ ಸೇವೆಗಾಗಿ ಎಷ್ಟು ಹವಾನಿಯಂತ್ರಿತ ವೋಲ್ವೋ ಬಸ್‌ಗಳನ್ನು ಒದಗಿಸಲಾಗಿದೆ;

ಇ) ಹಾಗಾದರೆ, ಈ ಸೇವೆಯಿಂದ ಯಾವ ಯಾವ ಸ್ಥಳಗಳನ್ನು ವೀಕ್ಷಿಸಬಹುದಾಗಿದೆ; ಈ ಬಸ್ಸಿನ ದರವೆಷ್ಟು;

ಈ) ಪ್ರತಿದಿನ ಸೇವೆಯ ಪ್ರಯೋಜನ ಪಡೆಯುತ್ತಿರುವವರ ಸರಾಸರಿ ಎಷ್ಟು;

ಉ) ಪ್ರತಿದಿನ ಬಸ್‌ಗಳು ಲಾಭದಾಯಕವಾಗಿ ಸಂಚರಿಸುತ್ತಿವೆಯೇ;

ಊ) ಇಲ್ಲದಿದ್ದಲ್ಲಿ, ಇದರಿಂದ ಪ್ರತಿದಿನ ಉಂಟಾಗುವ ನಷ್ಟವೆಷ್ಟು;

ಋ) ಈ ಸೇವೆಯಲ್ಲಿ ರಾಗುಗುಡ್ಡ, ಜಾನಪದ ಲೋಕ ಹಾಗೂ ಬನ್ನೇರುಘಟ್ಟ ಉದ್ಯಾನವನಗಳನ್ನು ಸೇರ್ಪಡೆಗೊಳಿಸಲಾಗುವುದೇ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಹೌದು.

ಆ) 7 ಹವಾನಿಯಂತ್ರಿತ ವೋಲ್ವೋ ಬಸ್‌ಗಳನ್ನು ಒದಗಿಸಲಾಗಿರುತ್ತದೆ.

ಇ) ಈ ಸೇವೆಯಿಂದ ಬೆಂಗಳೂರಿನ ಪ್ರಮುಖ ಸ್ಥಳಗಳಾದ ಕೆಂಪೇಗೌಡ ಬಸ್ ನಿಲ್ದಾಣ, ಟಿಪ್ಪು ಸುಲ್ತಾನ್ ಅರಮನೆ, ಲಾಲ್‌ಬಾಗ್, ಫ್ರೀಡಂ ಪಾರ್ಕ್, ಜೆ.ಎನ್.ಪ್ಲಾನೆಟೋರಿಯಂ/ಇಂದಿರಾಗಾಂಧಿ ಸಂಗೀತ ಕಾರಂಜಿ, ವಿಧಾನಸೌಧ/ ಉಚ್ಚನ್ಯಾಯಾಲಯ, ಕಬ್ಬನ್ ಪಾರ್ಕ್/ ವಿಶ್ವೇಶ್ವರಯ್ಯ ಮ್ಯೂಸಿಯಂ, ಎಂ.ಜಿ.ರಸ್ತೆ ಮೆಟ್ರೋ ನಿಲ್ದಾಣ, ಸೆಂಟ್ರಲ್‌ಮಾಲ್, ಗರುಡಮಾಲ್, ಗುರುದ್ವಾರ, ಹಲಸೂರು ಕೆರೆ,

ಕಮರ್ಷಿಯಲ್ ಸ್ಟ್ರೀಟ್, ಸೇಂಟ್ ಮೇರಿ ಬಸಿಲಿಕಾ ಚರ್ಚ್, ಫನ್‌ವರ್ಲ್ಡ್/ ಪ್ಯಾಲೇಸ್ ಗ್ರೌಂಡ್, ಲುಂಬಿಣಿ ಉದ್ಯಾನವನ, ಇಸ್ಕಾನ್, ಒರಯನ್ ಮಾಲ್, ಸ್ಯಾಂಕಿ ಕೆರೆ, ಮಂತ್ರಿ ಮಾಲ್‌ಗಳನ್ನು ಒಂದಿ ದಿನದಲ್ಲಿ ವೀಕ್ಷಿಸಬಹುದಾಗಿದೆ.

ಸದರಿ ಬಸ್ಸಿನ ದರ ವಯಸ್ಕರಿಗೆ ₹ 200/– ಹಾಗೂ ಮಕ್ಕಳಿಗೆ ₹ 100/– ಗಳನ್ನು ನಿಗದಿಪಡಿಸಲಾಗಿದೆ.

ಈ) ಪ್ರತಿದಿನ ಸರಾಸರಿ 20 ಪ್ರಯಾಣಿಕರು ಈ ಸೇವೆಯ ಪ್ರಯೋಜನ ಪಡೆಯುತ್ತಿದ್ದಾರೆ.

ಉ) ಇಲ್ಲ.

ಊ) ಹಾಪ್–ಇನ್ ಹಾಪ್–ಆಫ್ ಸೇವೆಯನ್ನು ದಿನಾಂಕ 30.05.2014 ರಿಂದ ಪರಿಚಯಿಸಲಾಗಿರುತ್ತದೆ. ಸದರಿ ಸೇವೆಯು ಪ್ರಾರಂಭಿಕ ಹಂತದಲ್ಲಿರುವುದರಿಂದ ಪ್ರತಿದಿನ ಈ ಸೇವೆಗಳಿಂದ ₹ 76,875/–ಗಳು ನಷ್ಟವಾಗುತ್ತಿದೆ.

ಋ) ಇಲ್ಲ.

3834(1033); ಶ್ರೀ ಗೋಪಾಲಯ್ಯ ಕೆ.

ಅ) ರಾಜ್ಯದ ಹಿಂದಳಿದ ವರ್ಗಗಳ ಆಯೋಗಕ್ಕೆ ಹೊಸ ಅಧ್ಯಕ್ಷರನ್ನು ನೇಮಿಸಲಾಗಿದೆಯೇ;

ಆ) ಇಲ್ಲದಿದ್ದಲ್ಲಿ, ಕಾರಣಗಳೇನು;

ಇ) ಈ ಆಯೋಗಕ್ಕೆ ಹೊಸ ಅಧ್ಯಕ್ಷರನ್ನು ಯಾವಾಗ ನೇಮಿಸಲಾಗುವುದು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ . ಕಲ್ಯಾಣ ಸಚಿವರು)

ಅ) ಹೌದು.